582

ಪರಾ.—ಹಾದಿಯು ಇದರಡೀ ಕಂಡ ಹಕ್ಕುಗಳು ಬ್ಯಾಕಿನಲ್ಲಿ ಕೊಡಲ್ಪಟ್ಟಿರುತ್ತವೆ :—

1. ಸರ್ವೆ ನಂ. 11ರ ಹದ್ದುವಿಂಗಡಿಸಲ್ಪಟ್ಟ ಲೈನಿನಲ್ಲಿ ಹಾದಿಯು ಹಕ್ಕು ಕಂಬದಹಳ್ಳಿ ಗ್ರಾಮಸ್ಥರ ದನಗಳಿಗೋಸ್ಕರ ಅವರ ಗೋಮಾಳ ಭೂಮಿಗಳಿಗೆ ಕೊಡಲ್ಪಟ್ಟಿರುತ್ತದೆ. ಈ ಹಾದಿಯು ಕಂಬದಹಳ್ಳಿಯ ಸರ್ವೆ ನಂ. 13ರ ಆಗ್ನೇಯ ಮೂಲೆಯಲ್ಲಿ ಹೊರಟು ಅದೇ ಗ್ರಾಮದ ಸರ್ವೆ ನಂ. 10ರ ಆಗ್ನೇಯ ಮೂಲೆಯಲ್ಲಿ ಆಖೈರಾಗುತ್ತದೆ. ಇದು 792 ಗಜಗಳು ಉದ್ದ ಮತ್ತು 22 ಗಜಗಳು ಅಗಲವುಳ್ಳದ್ದಾಗಿದೆ.

2. ಕಂಬದಹಳ್ಳಿಯ ಸರ್ವೆ ನಂ. 10ರಲ್ಲಿ ಹಾಲಿ ಇರುವ ಕಾಲಹಾದಿಯು 22 ಗಜಗಳ ಅಗಲಕ್ಕೆ ಸದರೀ ಗ್ರಾಮದ ದನಗಳಿಗೋಸ್ಕರ 418 ಗಜಗಳ ದೂರದಲ್ಲಿ ಕೊಳದವರಿಗೆ ಅಗಲ ಪಡಿಸಲ್ಪಡುವದು. ಈ ಹಾದಿಯು ಫಾರೆಸ್ಟನ್ನು ಸದರೀ ಸರ್ವೆ ನಂ. 10ರ ಆಗ್ನೇಯ ಮೂಲೆಯಲ್ಲಿ ಪ್ರವೇಶಿಸಿ ಉತ್ತರ ದಿಕ್ಕಾಗಿ ಕೊಳದ ವರಿಗೆ ಹೋಗುತ್ತದೆ.

3. ಕಂಬದಹಳ್ಳಿಯಿಂದ ಈ ಗ್ರಾಮದ ಸರ್ವೆ ನಂ. 10ರಲ್ಲಿ ಗೊಲ್ಲಹಳ್ಳಿಗೆ ಹಾಲಿ ಇರುವ ಕಾಲಹಾದಿಯು ಸಹಾ ಬಿಟ್ಟಿರುತ್ತದೆ. ಈ ಹಾದಿಯು ಫಾರೆಸ್ಟನ್ನು ಸರ್ವೆ ನಂ. 10ರ ಆಗ್ನೇಯ ಮೂಲೆಯಲ್ಲಿ ಪ್ರವೇಶಿಸಿ 836 ಗಜಗಳ ದೂರ ಉತ್ತರದಿಕ್ಕಾಗಿ ಹೋಗಿ ಫಾರೆಸ್ಟನ್ನು ಅದೇ ಸರ್ವೆ ನಂ. 10ರ ಈಶಾನ್ಯ ಮೂಲೆಯಲ್ಲಿ ಬಿಟ್ಟುಬಿಡುತ್ತದೆ.

ಹುಕುಂ ಬವೋಜೀಬ್,
ಜೆ. ಇ. ರಿಕೆಟ್ಸ್,
ಫಾರೆಸ್ಟ್ ಇಲಾಖೆಯ ಗವರ್ನ್‌ಮೆಂಟ್ ಅಫೀಷಿಯೇಟಿಂಗ್ ಸೆಕ್ರೆಟರಿ.

ಮುಜರೈ.

ಇನ್ಸ್ಟ್ರಾಮೆಂ.

ತಾರೀಖು 27ನೆ ನವಂಬರು 1903.

ನಂ. 1513—ಮು. ಫೈ. 2—93, ವ್ಯತಪಟ್ಟ ಮಾ॥ ರಾ॥ ರಾ॥ ವೆಂಕಟರಮಣಯ್ಯನವರು ಮತ್ತು ಮಾ॥ ರಾ॥ ರಾ॥ ಈರಡಿ ಸಿದ್ದಕೆಟ್ಟರು ಇವರುಗಳಿಗೆ ಬದಲಾಗಿ ಇದರಡೀ ಕಂಜ ದೊಡ್ಡ ಮನುಷ್ಯರುಗಳು ನಂಜಿನಗೂಡು ತಾಲ್ಲೂಕಿನ ಕಳಲೆಮುಲ್ಲಿರುವ ಶ್ರೀ ಲಕ್ಷ್ಮೀಕಾಂತ ಸ್ವಾಮಿಯ ದೇವಸ್ಥಾನದ ಧರ್ಮದರ್ಶಿಗಳಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ :—

(1) ಮಾ॥ ರಾ॥ ರಾ॥ ದೇವರಾಜಭಟ್ಟರು.
(2) ,, ಫ್ಲೀಡರಾದ ರಾಘವೇಂದ್ರರಾಯರು.

ಹುಕುಂ ಬವೋಜೀಬ್,
ಎಲ್. ಅನಂತಸ್ವಾಮಿ ರಾವ್,
ಮುಜರೈ ಇಲಾಖೆಯ ಡೆಪ್ಯುಟಿ ಸೆಕ್ರೆಟರಿ.

ಮಿಲಿಟೆರಿ.

ಇನ್ಸ್ಟ್ರಾರ್ನಾಮೆ.

ತಾರೀಖು 27ನೆ ನವಂಬರ್ 1903.

ನಂ. 1655—7, ಮೈಸೂರ ಶ್ರೀಮತ್ ಮಹಾರಾಜರವರು ಲೋಕಲ್ ಸರ್ವಿಸ್ ರೆಜಿಮೆಂಟಿನಲ್ಲಿ ಇದರಡೀ ಕಂಡ ಬಡ್ತಿಗಳು 1903ನೆ ಅಕ್ಟೋಬರ್ ಗುರ್ತೀ ತಾರೀಖಿನಾರಭ್ಯ ಮಾಡಿರುತ್ತಾರೆ :—

ಹೆಸರು.	ಯಾವ ದರ್ಜೆಯಿಂದ.	ಯಾವ ದರ್ಜೆಗೆ.
ಲಿಂಗೋಜಿ ನೋಹಿತೆಯವರು	ದಫೇದಾರ್	ಜಮೇದಾರ್
ಮಹಬೂತ್‌ಖಾ ಯವರು ...	ಡಿಟೋ	ಡಿಟೋ

ತಾರೀಖು 27ನೆ ನವಂಬರ್ 1903.

ನಂ. 1658—60, ಮೈಸೂರ ಪೈದಲ್ ಫಾಜಿನ ಮೊದಲನೇ ಪಟಾಲಮಿನಲ್ಲಿ ಇದರಡೀ ಕಂಡ ಬಡ್ತಿಯನ್ನು ಮೈಸೂರ ಶ್ರೀಮತ್ ಮಹಾರಾಜರವರು ಮಂಜೂರ್ಮಾಡಿರುತ್ತಾರೆ :—

ಹೆಸರು.	ಯಾವ ದರ್ಜೆಯಿಂದ.	ಯಾವ ದರ್ಜೆಗೆ.	ಪರಾ.
ಹನುಮಂತರಾವ್ ಸಾಲಂಕೆ ಯವರು.	ಮೊದಲನೇ ಗ್ರೇಡಿನ ಜಮೇದಾರ್.	ಎರಡನೇ ಗ್ರೇಡಿನ ಸುಬೇದಾರ್	1903ನೆ ಆಗಸ್ಟ್ 21ನೆ ತಾರೀಖಿನಾರಭ್ಯ

ಹುಕುಂ ಬವೋಜೀಬ್,
ಆರ್. ಜಿ. ಜೋನ್ಸ್, ಲೆಫ್ಟಿನೆಂಟ್ ಕರ್ನಲ್,
ಮಿಲಿಟೆರಿ ಅಸಿಸ್ಟೆಂಟ್.